

## ಲಲಿತಾ ಕೆ. ಹೊಸಪ್ಯಾಟಿ

ಸಂತೋಷ್ ಸಸಿಹಿತ್ಲು



# ನದಿ ನದಿ ಎಲ್ಲೀ ಹೋತು

ಸಾಗರ ಮುಟ್ಟಿ ಬರಾಕ ಅಂತ
ಹೊಂಟೇ ಬಿಟ್ತು ನದಿ
ಕಲ ಕಲ ಸದ್ದು ಮಾಡಿ
ಭರ ಭರ ಸುದ್ದಿ ಮಾಡಿ

ಗುಡ್ಡ ದಿನ್ನಿ ಹತ್ತಿ ಬಂತು
ಅಡ್ಡ ಬಂದೋರ ಸರಿಸಿ ಬಂತು
ಜುಳು ಜುಳು ಹರಿದು ಬಂತು
ಓಡಿ ಓಡಿ ಓಡಿ ಬಂತು

ದಡ ದಡ ಉರುಳುತ್ತಿತ್ತು
ಉಕ್ಕಿ ಉಕ್ಕಿ ಹರಿಯುತ್ತಿತ್ತು
ಮಕ್ಕಳ ಕಂಡ್ರೆ ನಗುತ್ತಿತ್ತು
ಟಾ ಟಾ ಮಾಡಿ ಸಾಗುತ್ತಿತ್ತು

ಕಾಡು ಮೇಡು ಸುತ್ತಿ ಬಂತು
ಹಕ್ಕಿ ಪಕ್ಕಿ ಕರೆಯುತ್ತಿತ್ತು
ತರಾತುರಿ ಮಾಡತ್ತಿತ್ತು
ಬಂಡಿ ಏರಿ ಇಳಿಯುತ್ತಿತ್ತು

ಬರ್ರಿ ಬರ್ರಿ ಕರೆಯುತ್ತಿತ್ತು
ಮುಂದೆ ಮುಂದೆ ಜರಿಯುತ್ತಿತ್ತು
ಸಿಟ್ಟು ಬಂದಂಗ ಓಡುತ್ತಿತ್ತು
ಹಿಡಿರಿ ಹಿಡಿರಿ ಅನ್ನುತ್ತಿತ್ತು

ಒಮ್ಮಿಂದೊಮ್ಮೆ ಎಲ್ಲಿ ಹೋತು
ನದಿ ನದಿ ಕಾಣದಾತು
ಕಣ್ಣು ಮುಚ್ಚಾಲೆ ಆಟ ಅಂತು
ಒಳಗೆ ಒಳಗೆ ಒಳಗೆ ಹೋತು

ಇಲ್ಲೇ ಇತ್ತು ಅಲ್ಲೇ ಇತ್ತು
ಮತ್ತೆ ಮತ್ತೆ ಸುತ್ತಾಡತಿತ್ತು
ಹೋದ ದಾರಿ ಮರೆತೆ ಹೋತು
ನದಿ ನದಿ ಕಾಣದಾತು

ದೊಡ್ಡೋರ ಗೆಳತನ ಬೇಕಂತು
ಪುಟ್ಟ ಬಾಲರ ಕೈಯ ಬಿಡ್ತು
ಕರೆದು ಕರೆದು ಸುಸ್ತಾತು
ನದಿ ನದಿ ಎಲ್ಲಿ ಹೋತು..

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68